# All India Radio: Bangalore
# National Bulletin In Kannada
# ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು
## 10.01.2025 : 1.10PM

**ಮುಖ್ಯಾಂಶಗಳು:**

1. ಪ್ರಯಾಣಿಕರ ಸುರಕ್ಷತೆ ಹಾಗೂ ಸುಗಮ ಸಂಚಾರಕ್ಕಾಗಿ ಉನ್ನತೀಕರಿಸಿದ ಅಮೃತ್ ಭಾರತ್ ರೈಲುಗಳಿಗೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹಸಿರು ನಿಶಾನೆ
2. ಮಹಾಕುಂಭ ಮೇಳದ ವ್ಯಾಪಕ ಪ್ರಸಾರಕ್ಕಾಗಿ ಕುಂಭವಾಣಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಚಾಲನೆ
3. ದೆಹಲಿ ವಿಧಾನಸಭಾ ಚುನಾವಣೆಗೆ ಅಧಿಸೂಚನೆ ಪ್ರಕಟ; ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ
4. ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್; ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ, ಸಾತ್ವಿಕ್ ಸಾಯಿರಾಜ್ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶ
5. ಭಾರತ-ಐರ್ಲ್ಯಾಂಡ್ ಅಂತಾರಾಷ್ಟ್ರೀಯ ಮಹಿಳಾ ಏಕದಿನ ಕ್ರಿಕೆಟ್; ಟಾಸ್ ಗೆದ್ದ ಐರ್ಲ್ಯಾಂಡ್ ಬ್ಯಾಟಿಂಗ್ ಆಯ್ಕೆ

*****

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಗೆ ಭೇಟಿ ನೀಡಿ ರೈಲ್ವೆ ಮೂಲಸೌಕರ್ಯದಲ್ಲಿನ ಪ್ರಗತಿಯನ್ನು ಪರಿಶೀಲಿಸಿದರು. ಇದೇ ವೇಳೆ, ಮಾಡ್ಯೂಲರ್ ಶೌಚಾಲಯಗಳು, ತುರ್ತು ವ್ಯವಸ್ಥೆಗಳು, ಅಗ್ನಿಶಾಮಕ ರಕ್ಷಣೆ ಸೇರಿದಂತೆ ಅಮೃತ್ ಭಾರತ್ ರೈಲುಗಳಲ್ಲಿ ಕೈಗೊಳ್ಳಲಾಗಿರುವ ಉನ್ನತೀಕರಿಸಿದ ಸೌಲಭ್ಯಗಳನ್ನು ಸಚಿವರು ಅನಾವರಣಗೊಳಿಸಿದರು.ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಡಿಮೆ ಆದಾಯದ ಜನರಿಗೆ ಉತ್ತಮ ಗುಣಮಟ್ಟ ಸೇವೆ ಒದಗಿಸಲು ಕೈಗೆಟುಕುವ ದರದ ೫೦ ಹೊಸ ರೈಲುಗಳನ್ನು ಶೀಘ್ರದಲ್ಲೇ ಪರಿಚಯಿಸಲಾಗುವುದು. ಎಲ್ಲಾ ದೇಶವಾಸಿಗಳಿಗೆ ಜಾಗತಿಕ ಮಟ್ಟದ ಸೌಲಭ್ಯಗಳನ್ನು ಒದಗಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನದ ಸಾಕಾರಕ್ಕೆ ಅಮೃತ್ ಭಾರತ್ ೨.೦ ಯೋಜನೆಗೆ ಚಾಲನೆ ನೀಡಲಾಗಿದೆ ಎಂದರು. ಪ್ರಯಾಣಿಕರ ಸೌಕರ್ಯ ಮತ್ತು ಸುರಕ್ಷತೆಗಾಗಿ ೧೨ ಮಹತ್ವದ ಬದಲಾವಣೆಗಳೊಂದಿಗೆ ಅಮೃತ್ ಭಾರತ್ ರೈಲು ಕೋಚ್‌ಗಳ ಉನ್ನತೀಕರಣ ಕುರಿತು ಅವರು ವಿವರಿಸಿದರು.

*****

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿಂದು ೨೦೨೫ರ ಮಹಾಕುಂಭಕ್ಕಾಗಿ ಆಕಾಶವಾಣಿಯ ವಿಶೇಷ ವಾಹಿನಿ ಕುಂಭವಾಣಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಂದು ಚಾಲನೆ ನೀಡಿದರು. ಇದೇ ವೇಳೆ, ಕುಂಭ ಮಂಗಳ ಧುನ್‌ಗೆ ಅವರು ಚಾಲನೆ ನೀಡಿದ್ದು, ಕಾರ್ಯಕ್ರಮದಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ವರ್ಚುಯಲ್ ಮೂಲಕ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಸಾರ ಭಾರತಿ ಚೇರ್‌ಮನ್ ಡಾ.ನವನೀತ್ ಕುಮಾರ್ ಸೆಹಗಲ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೌರವ್ ದ್ವಿವೇದಿ, ಆಕಾಶವಾಣಿ ಮಹಾನಿರ್ದೇಶಕರಾದ ಡಾ.ಪ್ರಜ್ಞಾ ಪಾಲಿವಾಲ್ ಗೌರ್, ದೂರದರ್ಶನ ನಿರ್ದೇಶಕರಾದ ಕಾಂಚನ್ ಪ್ರಸಾದ್ ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮಹಾಕುಂಭ ಜಾತಿ, ಮತ ಹಾಗೂ ಅಸಮಾನತೆಯನ್ನು ಮೀರಿದ ಮತ್ತು ಏಕತೆ ಸಂದೇಶ ಸಾರುತ್ತದೆ ಎಂದು ಹೇಳಿದರು.

ಬಳಿಕ ಮಾತನಾಡಿದ ಪ್ರಸಾರ ಭಾರತಿ ಚೇರ್‌ಮನ್ ಡಾ.ನವೀತ್ ಕುಮಾರ್ ಸೆಹಗಲ್, ಮಹಾಕುಂಭದ ವ್ಯಾಪಕ ಪ್ರಚಾರ ಹಾಗೂ ಪ್ರಸಾರಕ್ಕಾಗಿ ಹಲವಾರು ವ್ಯವಸ್ಥೆ ಮಾಡಲಾಗಿದೆ ಎಂದರು. ಕುಂಭವಾಣಿ ವಾಹಿನಿ ಇಂದಿನಿಂದ ಆರಂಭಗೊಂಡು ಫೆಬ್ರವರಿ ೨೬ರವರೆಗೆ, ಬೆಳಗ್ಗೆ ೫.೫೫ ರಿಂದ ರಾತ್ರಿ ೧೦.೦೫ರ ವರೆಗೆ ಮಹಾಕುಂಭ ಮೇಳದ ಪ್ರತಿ ಚಟುವಟಿಕೆ ಆಧರಿತ

ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿದೆ. ಅಮೃತ ಸ್ನಾನದ ನೇರ ವೀಕ್ಷಕ ವಿವರಣೆ ಇದರಲ್ಲಿ ಮೂಡಿಬರಲಿದ್ದು, ಕುಂಭವಾಣಿಯನ್ನು ೧೦೩.೫ ತರಂಗಾಂತರ, ನ್ಯೂಸ್ ಆನ್ ಏರ್ ಆಪ್ ಹಾಗೂ ವೇವ್ಸ್ ಒಟಿಟಿ ವೇದಿಕೆಯಲ್ಲೂ ಆಲಿಸಬಹುದಾಗಿದೆ.

*****

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ೧೮ನೇ ಪ್ರವಾಸಿ ಭಾರತೀಯ ದಿವಸ್ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಒಡಿಶಾ ರಾಜಧಾನಿಗೆ ನಿನ್ನೆ ಆಗಮಿಸಿದ ರಾಷ್ಟ್ರಪತಿ ಅವರು, ಇಂದು ಸಮಾವೇಶದಲ್ಲಿ ಪಾಲ್ಗೊಂಡಿರುವ ೭೫ ದೇಶಗಳ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದೇ ವೇಳೆ ಅವರು, ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಕೊಡುಗೆ ನೀಡಿದ ಅನಿವಾಸಿ ಭಾರತೀಯ ಸಮುದಾಯದ ಸದಸ್ಯರಿಗೆ ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಈ ಪ್ರಶಸ್ತಿಯು ಅನಿವಾಸಿ ಭಾರತೀಯರಿಗೆ ಅಥವಾ ಅವರು ನಡೆಸುತ್ತಿರುವ ಸಂಸ್ಥೆಗಳಿಗೆ ನೀಡಲಾಗುವ ಭಾರತದ ಅತ್ಯುನ್ನತ ಪ್ರಶಸ್ತಿಯಾಗಿದೆ.

*****

ದೆಹಲಿ ವಿಧಾನಸಭಾ ಚುನಾವಣೆಗೆ ಇಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಅಭ್ಯರ್ಥಿಗಳು ಇದೇ ೧೭ ರವರೆಗೆ ನಾಮಪತ್ರಗಳನ್ನು ಸಲ್ಲಿಸಬಹುದಾಗಿದ್ದು, ನಾಮಪತ್ರ ಹಿಂಪಡೆಯಲು ಈ ತಿಂಗಳ ೨೦ ಕೊನೆಯ ದಿನವಾಗಿದೆ. ಫೆಬ್ರವರಿ ೫ ರಂದು ಮತದಾನ ನಡೆಯಲಿದ್ದು, ಫೆಬ್ರವರಿ ೮ ರಂದು ಮತ ಎಣಿಕೆ ನಡೆಯಲಿದೆ. ದೆಹಲಿಯಲ್ಲಿ ಒಂದು ಕೋಟಿ ೫೫ ಲಕ್ಷಕ್ಕೂ ಹೆಚ್ಚು ಮತದಾರರಿದ್ದು,, ೮೩ ಲಕ್ಷಕ್ಕೂ ಹೆಚ್ಚು ಪುರುಷ ಮತದಾರರು ಮತ್ತು ೭೧ ಲಕ್ಷಕ್ಕೂ ಹೆಚ್ಚು ಮಹಿಳಾ ಮತದಾರರಿದ್ದಾರೆ. ಆಡಳಿತಾರೂಢ ಆಮ್ ಆದ್ಮಿ ಪಕ್ಷವು ರಾಷ್ಟ್ರ ರಾಜಧಾನಿಯ ಎಲ್ಲಾ ವಿಧಾನಸಭಾ ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಈಗಾಗಲೇ ಘೋಷಿಸಿದೆ, ಆದರೆ ಬಿಜೆಪಿ ಇದುವರೆಗೆ ೨೯ ಅಭ್ಯರ್ಥಿಗಳನ್ನು ಮತ್ತು ಕಾಂಗ್ರೆಸ್ ೪೮ ಅಭ್ಯರ್ಥಿಗಳನ್ನು ಘೋಷಿಸಿದೆ.

*****

ಪರೀಕ್ಷಾ ಪೇ ಚರ್ಚಾ ೨೦೨೫ರ ೮ನೇ ಆವೃತ್ತಿಗೆ ದೇಶ ಮತ್ತು ವಿದೇಶಗಳ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಂದ ೨ ಕೋಟಿ ೭೦ ಲಕ್ಷಕ್ಕೂ ಅಧಿಕ ನೋಂದಣಿಗಳು ಆಗಿವೆ. ಮೈ ಜಿಒವಿ ಡಾಟ್ ಇನ್ ನಲ್ಲಿ ಕಾರ್ಯಕ್ರಮದ ಆನ್ ಲೈನ್ ನೋಂದಣಿ ನಡೆಯುತ್ತಿದೆ.ಕಳೆದ ತಿಂಗಳು ೧೪ರಂದು ಆರಂಭವಾದ ನೋಂದಣಿ, ಈ ತಿಂಗಳ ೧೪ರ ವರೆಗೆ ಮುಕ್ತವಾಗಿರುತ್ತದೆ.ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮುಖ ಉಪಕ್ರಮವಾದ ಪರೀಕ್ಷಾ ಪೇ ಚರ್ಚಾ, ಪರೀಕ್ಷೆಗೆ ಸಂಬಂಧಿಸಿದ ಒತ್ತಡವನ್ನು ಕಲಿಕೆ ಮತ್ತು ಆಚರಣೆಯ ಹಬ್ಬವಾಗಿ ಪರಿವರ್ತಿಸುವ ರಾಷ್ಟ್ರವ್ಯಾಪಿ ಆಂದೋಲನವಾಗಿದೆ.

*****

ಖ್ಯಾತ ಹಿನ್ನೆಲೆ ಗಾಯಕ ಪಿ.ಜಯಚಂದ್ರನ್ ಅವರು ಕೇರಳದ ತ್ರಿಶೂರ್‌ನಲ್ಲಿ ನಿನ್ನೆ ರಾತ್ರಿ ನಿಧನರಾಗಿದ್ದಾರೆ. ಅವರಿಗೆ ೮೦ ವರ್ಷ ವಯಸ್ಸಾಗಿತ್ತು. ಕನ್ನಡ, ಮಲಯಾಳಂ, ತೆಲುಗು, ಹಿಂದಿ, ಸೇರಿದಂತೆ ವಿವಿಧ ಭಾಷೆಗಳಲ್ಲಿ ೧೬ ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಅವರು ಹಾಡಿದ್ದಾರೆ. ಹಿನ್ನೆಲೆ ಗಾಯಕ ಪಿ. ಜಯಚಂದ್ರನ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ವಿವಿಧ ಭಾಷೆಗಳಲ್ಲಿ ಜಯಚಂದ್ರನ್ ಅವರ ಭಾವಪೂರ್ಣ ಗಾಯನಗಳು ಮುಂದಿನ ಪೀಳಿಗಳಿಗೆ  ಹೃದಯಸ್ಪರ್ಶಿಯಾಗಿರಲಿವೆ ಎಂದು ಸ್ಮರಿಸಿದ್ದಾರೆ.

*****

ಪಂಜಾಬ್, ಹರಿಯಾಣ, ಚಂಡೀಗಢ ಮತ್ತು ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಹಿಮಾಚಲ ಪ್ರದೇಶ, ಒಡಿಶಾ ಸೇರಿದಂತೆ ಬಹುತೇಕ ಈಶಾನ್ಯ ರಾಜ್ಯಗಳಲ್ಲಿ ಸಂಜೆ ಹಾಗೂ ಮುಂಜಾನೆ ವೇಳೆ ದಟ್ಟಮಂಜು ಮುಸುಕಿದ ವಾತಾವರಣ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಜಮ್ಮು-ಕಾಶ್ಮೀರ, ಲಡಾಖ್, ಮುಝಾಫರ್‌ಬಾದ್ ಹಾಗೂ ಹಿಮಾಚಲಪ್ರದೇಶಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಶೀತಗಾಳಿ ಮುಂದುವರೆಯಲಿದೆ. ಇದರಿಂದಾಗಿ ವಿಮಾನ ಹಾಗೂ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ. ಪ್ರಯಾಗ್ ರಾಜ್ ಎಕ್ಸ್‌ಪ್ರೆಸ್, ಸಂಪೂರ್ಣ ಕ್ರಾಂತಿ ಎಕ್ಸ್ ಪ್ರೆಸ್ ಹಾಗೂ ಶ್ರಮಶಕ್ತಿ ಸೇರಿದಂತೆ ದೆಹಲಿ ಮಾರ್ಗವಾಗಿ ಹೋಗುವ ಸುಮಾರು ೨೬ ರೈಲುಗಳ ಸಮಯದಲ್ಲಿ

ವಿಳಂಬವಾಗಿದೆ. ನೂರಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲಿ ವ್ಯತ್ಯಯಾವಾಗಿದ್ದು ಈ ಸಂಬಂಧ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣ ಸೂಚನೆಯನ್ನು ನೀಡಿದೆ.

*****

ಕೌಲಾಲಂಪುರದಲ್ಲಿಂದು ನಡೆಯಲಿರುವ ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಜೋಡಿ, ಮಲೇಷ್ಯಾದ ಯೂ ಸಿನ್ ಓಂಗ್ ಮತ್ತು ಈ ಯಿ ಟಿಯೋ ಜೋಡಿಯನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೪.೪೦ ಕ್ಕೆ ಆರಂಭವಾಗಲಿದೆ. ಪ್ರಿ-ಕ್ವಾರ್ಟರ್ ಫೈನಲ್ ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿ ೨೧-೧೫, ೨೧-೧೫ರ ನೇರ ಗೇಮ್ ಗಳಿಂದ ಮಲೇಷ್ಯಾದ ಅಝ್ರಿನ್-ತಾನ್ ಜೋಡಿಯ ವಿರುದ್ಧ ಜಯ ಗಳಿಸಿದೆ. ಎಚ್.ಎಸ್. ಪ್ರಣಯ್ ೨ನೇ ಸುತ್ತಿನಲ್ಲಿ ಸೋಲನುಭವಿಸಿ ಸ್ಪರ್ಧೆಯಿಂದ ನಿರ್ಗಮಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ನಲ್ಲಿ ಮಾಳವಿಕಾ ಬನ್ಸೋಡ್ ಹಾಗೂ ಡಬಲ್ಸ್ ವಿಭಾಗದಲ್ಲಿ ತ್ರಿಶಾ ಜೊಲ್ಲಿ ಮತ್ತು ಗಾಯಿತ್ರಿ ಜೋಡಿ ಸಹ ಪ್ರಿ-ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸೋತು ನಿರಾಸೆ ಅನುಭವಿಸಿದೆ.

*****

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಮೂರು ಪಂದ್ಯಗಳ ಅಂತಾರಾಷ್ಟ್ರೀಯ ಮಹಿಳಾ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿಂದು ಭಾರತ ಹಾಗೂ ಐರ್ಲ್ಯಾಂಡ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಐರ್ಲ್ಯಾಂಡ್ ತಂಡ, 4 ವಿಕೆಟ್ ನಷ್ಟಕ್ಕೆ 130 ರನ್ ಗಳಿಸಿ ಆಡುತ್ತಿದೆ. ಸ್ಮೃತಿ ಮಂದಾನ ತಂಡದ ನೇತೃತ್ವವಹಿಸಿದ್ದು, ದೀಪ್ತಿ ಶರ್ಮಾ ಉಪನಾಯಕಿಯಾಗಿದ್ದಾರೆ. ನಾಯಕಿ ಹರ್ಮನ್ ಪ್ರೀತ್ ಕೌರ್, ರೇಣುಕಾ ಸಿಂಗ್ ಠಾಕೂರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಸರಣಿಯ ಎರಡನೇ ಪಂದ್ಯ ಬರುವ ಭಾನುವಾರ ಹಾಗೂ ಕೊನೆಯ ಪಂದ್ಯ ಇದೇ ೧೫ ರಂದು ನಡೆಯಲಿದೆ.

*****

ಗುವಾಹಟಿಯ ಇಂದಿರಾ ಗಾಂಧಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಇಂದು ಇಂಡಿಯನ್ ಸೂಪರ್ ಲೀಗ್ ಫುಟ್ಬಾಲ್‌ನಲ್ಲಿ, ನಾರ್ತ್ ಈಸ್ಟ್ ಯುನೈಟೆಡ್ ತಂಡ, ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದೆ. ಪಂದ್ಯವು ಸಂಜೆ ೭.೩೦ಕ್ಕೆ ಪ್ರಾರಂಭವಾಗಲಿದೆ.

****

ಇಂದು ಆಕ್ಲೆಂಡ್‌ನಲ್ಲಿ ನಡೆಯಲಿರುವ ಎಎಸ್‌ಬಿ ಕ್ಲಾಸಿಕ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಜೊತೆಗಾರ ಫ್ರಾನ್ಸ್‌ನ ಅಲ್ಬಾನೊ ಒಲಿವೆಟ್ಟಿ ಅವರು ಕ್ರೊಯೇಷಿಯಾದ ನಿಕೋಲಾ ಮೆಕ್ಟಿಕ್ ಮತ್ತು ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೋಡಿಯನ್ನು ಎದುರಿಸಲಿದ್ದಾರೆ.

*****

ಇದೇ ತಿಂಗಳ ೧೩ರಿಂದ ಆರಂಭವಾಗಲಿರುವ ಚೊಚ್ಚಲ ಖೋ ಖೋ ವಿಶ್ವಕಪ್‌ಗೆ ಭಾರತದ ಪುರುಷ ಮತ್ತು ಮಹಿಳಾ ತಂಡಗಳನ್ನು ಭಾರತೀಯ ಖೋ ಖೋ ಒಕ್ಕೂಟ ನಿನ್ನೆ ಪ್ರಕಟಿಸಿದೆ.ದೆಹಲಿ ಮತ್ತು ನೊಯ್ಡಾದಲ್ಲಿ ಜನವರಿ ೧೯ರವರೆಗೆ ನಡೆಯಲಿರುವ ಟೂರ್ನಿಯಲ್ಲಿ ೨೦ ಪುರುಷರ ಹಾಗೂ ೧೯ ಮಹಿಳಾ ತಂಡಗಳು ಸೇರಿ ಒಟ್ಟು ೩೯ ತಂಡಗಳು ಪಾಲ್ಗೊಳ್ಳಲಿವೆ.ಪ್ರತೀಕ್ ವೈಕರ್ ಭಾರತದ ಪುರುಷರ ತಂಡವನ್ನು ಹಾಗೂ ಪ್ರಿಯಾಂಕಾ ಮಹಿಳಾ ತಂಡವನ್ನು ಮುನ್ನಡೆಸಲಿದ್ದಾರೆ. ಕರ್ನಾಟಕದ ಎಂ.ಕೆ. ಗೌತಮ್ ಮತ್ತು ಚೈತ್ರಾ, ಭಾರತ ವಿಶ್ವಕಪ್ ತಂಡಗಳಲ್ಲಿ ಸ್ಥಾನ ಪಡೆದಿದ್ದಾರೆ.

***END***